# ವಚನಗಳಲ್ಲಿ ಪ್ರಸಾದ ತತ್ವ: ಆಯ್ದಕ್ಕಿ ದಂಪತಿಗಳ ವಚನಗಳನ್ನು ಅನುಲಕ್ಷಿಸಿ

**ಗಾಯತ್ರಿದೇವಿ***

**DOI: https://doi.org/10.5281/zenodo.22300033**

**ABSTRACT**

೧೨ನೇ ಶತಮಾನದ ವಚನ ಚಳುವಳಿಯು ಸಮಾಜಕ್ಕೆ ನೀಡಿದ ಶ್ರೇಷ್ಠ ಪರಿಕಲ್ಪನೆಗಳಲ್ಲಿ 'ಪ್ರಸಾದ' ಅತ್ಯಂತ ಮಹತ್ವದ್ದಾಗಿದೆ. ಇದು ಕೇವಲ ಅನ್ನ ಅಥವಾ ದೇವರಿಗೆ ಅರ್ಪಿಸುವ ನೈವೇದ್ಯಕ್ಕೆ ಮಾತ್ರ ಸೀಮಿತವಾಗಿರದೆ; ಅಹಂಕಾರವನ್ನು ತೊರೆದು ಸಮರ್ಪಣಾಭಾವದಿಂದ ಸ್ವೀಕರಿಸುವ ಆಂತರಿಕ ಶುದ್ಧತೆಯ ಪ್ರತೀಕವಾಗಿದೆ. ಷಟ್ಸ್ಥಲ ಸಿದ್ಧಾಂತದಲ್ಲಿ ಪ್ರಮುಖವಾದ ಪ್ರಸಾದದ ಕುರಿತು ವಚನಕಾರರಲ್ಲಿರುವ ಬಹುಮುಖಿ ನಿಲುವುಗಳನ್ನು ಶೋಧಿಸುತ್ತಾ, ವಿಶೇಷವಾಗಿ ಕಾಯಕನಿಷ್ಠರಾದ ಆಯ್ದಕ್ಕಿ ಮಾರಯ್ಯ ಮತ್ತು ಲಕ್ಕಮ್ಮ ದಂಪತಿಗಳ ವಚನಗಳ ಹಿನ್ನೆಲೆಯಲ್ಲಿ ಈ ತತ್ವವನ್ನು ವಿಶ್ಲೇಷಿಸಲಾಗಿದೆ. ಮಾರಯ್ಯನವರ ಪ್ರಕಾರ ಸತ್ಯ ಮತ್ತು ಚಿತ್ತಶುದ್ಧಿಯೇ ಪ್ರಸಾದವಾದರೆ, ಲಕ್ಕಮ್ಮನವರ ದೃಷ್ಟಿಯಲ್ಲಿ ಅದು ಶರಣರ ಸಂಪರ್ಕದಿಂದ ಕಾಯ, ಜೀವ, ಅಂತರಂಗಗಳನ್ನು ಶುದ್ಧೀಕರಿಸುವ ಉನ್ನತ ಜ್ಞಾನವಾಗಿದೆ. ದಾಸೋಹದ ಮುಂದುವರಿದ ರೂಪವಾದ 'ಪ್ರಸಾದ'ವು ಆರ್ಥಿಕ ಸಮಾನತೆ ಹಾಗೂ ಮಾನವನ ಆಂತರಿಕ-ಬಾಹ್ಯ ಬದುಕನ್ನು ಪಾವನಗೊಳಿಸುವ ಸಾಂಸ್ಕೃತಿಕ ಆಶಯವಾಗಿ ಹೇಗೆ ರೂಪುಗೊಂಡಿದೆ ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ.

**KEYWORDS:** ಪ್ರಸಾದ ತತ್ವ, ವಚನ ಸಾಹಿತ್ಯ, ಆಯ್ದಕ್ಕಿ ದಂಪತಿಗಳು, ಷಟ್ಸ್ಥಲ, ಕಾಯಕ ಮತ್ತು ದಾಸೋಹ.

* **ಡಾ. ಗಾಯತ್ರಿ ದೇವಿ,** ಅಧ್ಯಾಪಕರು, ಕನ್ನಡ ವಿಭಾಗ, ಸುವರ್ಣಗಂಗೆ ಕ್ಯಾಂಪಸ್, ಸ್ನಾತಕೋತ್ತರ ಕೇಂದ್ರ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರ.

**ಪ್ರಸಾದ ಪರಿಕಲ್ಪನೆ**

ವಚನ ಸಾಹಿತ್ಯವು ಕರ್ನಾಟಕದ ಬಹುದೊಡ್ಡ ಸಾಂಸ್ಕೃತಿಕ ಸಂಪತ್ತು. ಸಾಹಿತ್ಯವಾಗುವ ಉದ್ದೇಶದಿಂದ ಹುಟ್ಟದ ಇದು 12ನೇ ಶತಮಾನದ ಪ್ರಜಾಸಾಹಿತ್ಯವಾಗಿ, ಚಳುವಳಿಯಾಗಿ ರೂಪುಗೊಂಡಿತು. ಆತ್ಮಕಲ್ಯಾಣದೊಂದಿಗೆ ಸಮಾಜ ಕಲ್ಯಾಣವನ್ನು ಸಾಧಿಸುವ ಗುರಿ ವಚನ ಸಾಹಿತ್ಯದ್ದು. 12ನೇ ಶತಮಾನದಲ್ಲಿ ರಾಜಸತ್ತೆ, ಪುರೋಹಿತಸತ್ತೆ ಹಾಗೂ ಪುರುಷಸತ್ತೆಗಳ ವಿರುದ್ಧ ಪ್ರಜಾಸತ್ತೆಯನ್ನು ಸ್ಥಾಪಿಸಿತು. ವಚನಗಳು 12ನೇ ಶತಮಾನದಲ್ಲಿ ಜನವರ್ಗವು ಅನುಭವಿಸಿದ ಸ್ವಾತಂತ್ರ್ಯದ ಫಲ. ಆತ್ಮವಿಮರ್ಶೆಯಿಂದ ಪ್ರಾರಂಭವಾಗಿ ಸಮಾಜೋದ್ಧಾರಕ್ಕೆ ಚಿಂತಿಸಿದ ಹಲವು ವಚನಕಾರರ ವೈಚಾರಿಕ ಸ್ವರೂಪವೇ ಇಂದು ಸರ್ವಕಾಲಿಕ ಸತ್ಯವಾಗಿ ಕಾಣುವ ವಚನ ಸಾಹಿತ್ಯವಾಗಿದೆ. ಹೀಗೆ ಆರಂಭವಾದಂತಹ ವಚನ ಚಳುವಳಿಯು ಹಲವು ಸೈದ್ಧಾಂತಿಕ ಅಂಶಗಳನ್ನು ಒಳಗೊಂಡಿದ್ದು, ಲಿಂಗತಾರತಮ್ಯ, ವರ್ಗತಾರತಮ್ಯ, ಜಾತಿತಾರತಮ್ಯ, ಆರ್ಥಿಕ ಸಂಪನ್ಮೂಲಗಳ ಅಸಮಾನ ಹಂಚಿಕೆ, ಮೂಢನಂಬಿಕೆ, ಹಲವು ಸಾಮಾಜಿಕ ದುರಾಚಾರಗಳನ್ನು ವಿರೋಧಿಸಿ ಸಮಸಮಾಜದ ನಿರ್ಮಾಣಕ್ಕೆ ಹೆಚ್ಚು ಒತ್ತು ನೀಡಿದರು. ತಮ್ಮ ಅನುಭವಗಳನ್ನು ಅನುಭಾವವನ್ನಾಗಿಸಿಕೊಂಡು ರಚನೆಯಾದ ವಚನಗಳು ಸಮಾಜದ ಅಂಕುಡೊಂಕುಗಳನ್ನು ತಿದ್ದಿ ಸಾಮಾಜಿಕ ಸಮಾನತೆಯನ್ನು ಸಾಧಿಸಲು ಬೇಕಾದ ಮಾರ್ಗಗಳಾಗಿ ಬೆಳೆದವು.

ಗುರು, ಲಿಂಗ, ಜಂಗಮ, ಕಾಯಕ, ದಾಸೋಹ, ಬಯಲು-ಆಲಯ ಹೀಗೆ ಹಲವು ಪರಿಕಲ್ಪನೆಗಳನ್ನು ಸಮಾಜಕ್ಕೆ ನೀಡಿದ ಕೀರ್ತಿ ವಚನಕಾರರಿಗೆ ಸಲ್ಲುತ್ತದೆ. ಈ ಪರಿಕಲ್ಪನೆಗಳು ಪದದ ಶಬ್ದಾರ್ಥಕ್ಕಿಂತ ವಿಭಿನ್ನ ಹಾಗೂ ವಿಶಾಲಾರ್ಥವನ್ನು ಪಡೆದುಕೊಂಡು ನಮ್ಮ ಆಲೋಚನೆಗಳನ್ನು ಹೊಸ ದಿಗಂತದೆಡೆಗೆ ಕೊಂಡೊಯ್ಯುವಂತೆ ಮಾಡುವ ಜ್ಞಾನಕೇಂದ್ರಗಳಾಗಿವೆ. ಅಂತಹ ಪರಿಕಲ್ಪನೆಗಳಲ್ಲಿ ಬಹುಮುಖ್ಯವಾದ ಪರಿಕಲ್ಪನೆ ಎಂದರೆ ಪ್ರಸಾದ.

ಪ್ರಸಾದ ಎಂಬುದು ವೀರಶೈವ ತಾತ್ವಿಕತೆಯಲ್ಲಿ ಅತಿ ಮುಖ್ಯವಾದ ಹಾಗೂ ಬಹು ವಿಸ್ತಾರತೆಯನ್ನು ಪಡೆದುಕೊಂಡ ಪರಿಕಲ್ಪನೆ. ವಚನಕಾರರು ಷಟ್ಥಲಗಳಲ್ಲಿ ಅತಿ ಹೆಚ್ಚು ನಂಬಿಕೆಯನ್ನು ಹೊಂದಿದ್ದಾರೆ. ವೀರಶೈವ ಧರ್ಮದ ಅತಿ ಮುಖ್ಯ ಕೊಡುಗೆ ಎಂದರೆ ಷಟ್ಥಲಗಳು. ಶರಣರು ಅವರಿಗಿಂತಲೂ ಹಿಂದಿನಿಂದಲೂ ಆಚರಣೆಯಲ್ಲಿದ್ದಂತಹ ಈ ಷಟ್ಥಲಗಳಿಗೆ ವ್ಯಾಪಕತೆಯನ್ನು ತಂದುಕೊಟ್ಟರು. ವಿಭಿನ್ನ ಹಂತಗಳಲ್ಲಿ ಯಾವುದೇ ತಾರತಮ್ಯವಿಲ್ಲದೆ ಎಲ್ಲರನ್ನೂ ಷಟ್ಥಲ ಮಾರ್ಗಕ್ಕೆ ಕರೆತಂದರು. ಶರಣರ ಕಾಲಕ್ಕೆ ಷಟ್ಥಲವು ಪರಿಪೂರ್ಣವಾಗಿ ಬೆಳೆದು ಸಾಧನೆಯ ದಾರಿಯಾಯಿತು. 'ಸ್ಥಲ' ಎನ್ನುವ ಮಾತಿಗೆ ಸ್ಥಾನ, ಮೆಟ್ಟಿಲು ಎಂಬ ಅರ್ಥವಿದೆ. ಸಾಧಕನು ತನ್ನ ಗುರಿಯನ್ನು ಸೇರುವ ಹಲವು ಹಂತಗಳಾಗಿವೆ. ಆ 6 ಸ್ಥಲಗಳೆಂದರೆ 1. ಭಕ್ತಸ್ಥಲ, 2. ಮಹೇಶ್ವರಸ್ಥಲ, 3. ಪ್ರಸಾದಸ್ಥಲ, 4. ಪ್ರಾಣಲಿಂಗಸ್ಥಲ, 5. ಶರಣಸ್ಥಲ, 6. ಐಕ್ಯಸ್ಥಲ.

ವೀರಶೈವರ ಆಚರಣೆಯ ಷಟ್ಸ್ಥಲಗಳಲ್ಲಿ 3ನೇ ಸ್ಥಲ ಪ್ರಸಾದ ಅಥವಾ ಪ್ರಸಾದಿಸ್ಥಲ. ಸಾಮಾನ್ಯವಾಗಿ ಪ್ರಸಾದ ಎಂಬುದಕ್ಕೆ ಆಹಾರ, ಅನ್ನ, ದೇವರಿಗೆ ಅರ್ಪಿಸಿದ ನೈವೇದ್ಯ ಎಂಬ ಅರ್ಥಗಳನ್ನು ಒಳಗೊಂಡಿದೆ. ಪ್ರಸಾದ ಎಂಬ ಪದವು ಅರ್ಪಣೆ ಎಂಬ ಪರಿಕಲ್ಪನೆಯ ತಳಹದಿಯಿಂದ ಬಂದದ್ದು. ಮಾನವ ತನ್ನ ಅಹಂಕಾರವನ್ನು ಬಿಟ್ಟು ಅರ್ಪಣಾಭಾವದಿಂದ ಸಮರ್ಪಿಸಿಕೊಂಡದ್ದು ಎಂಬುದು ಆಧ್ಯಾತ್ಮಿಕ ಅರ್ಥವಾಗಿದೆ. ಪ್ರಸಾದವೆಂದರೆ ಆಹಾರ ಪಾನೀಯಗಳಷ್ಟೇ ಅಲ್ಲ. ನಮ್ಮ ಇಂದ್ರಿಯ ವಿಷಯಗಳಾದ ರೂಪ, ರಸ, ಗಂಧ, ಸ್ಪರ್ಶ ಮತ್ತು ಶಬ್ದಗಳನ್ನೂ ಒಳಗೊಳ್ಳುತ್ತದೆ.

'ಪ್ರ' ಪೂರ್ವದ ಉಪಸರ್ಗವು 'ಸದ್' ಎಂಬ ಧಾತುವಿನೊಂದಿಗೆ ಸೇರಿ ಪ್ರಸಾದ ಎಂಬ ಪದ ನಿಷ್ಪತ್ತಿಯಾಗಿದೆ. 'ಪ್ರಸನ್ನತೆ', ಶಿವಾನುಗ್ರಹ, ನಿರ್ಮಲತೆ, ಕಾವ್ಯಗುಣ ಎಂಬ ಹಲವು ಅರ್ಥಗಳನ್ನು ಭಾರತದ ಅತಿ ಪ್ರಾಚೀನ ಕೃತಿಯಾದಂತಹ ಅಮರಕೋಶ ವಿವರಿಸುತ್ತದೆ.

**ವೀರಾಗಮದ ಪ್ರಕಾರ**

**"ಪಕಾರಂ ಪಾಪನಾಶಂ ಚ ರೇಫೋ ಭೋಗಂ ವಹೇತ್ಸದಾ**
**ತಯೋರ್ದ್ವಿತಯಸಂಯುಕ್ತಂ ಮಾತೃಕಂ ನ್ಯಾಸಗರ್ಭಿತಂ"**

ಅಂದರೆ ಪ ಕಾರವು ಪಾಪನಾಶನವನ್ನೂ 'ರ' ಎಂದರೆ ಸರ್ವಭೋಗಗಳು ಎಂಬ ಅರ್ಥವನ್ನು ಪಡೆದಿದೆ. ಹಾಗೂ ಸಾ-ದ ಎಂದರೆ ಎರಡನ್ನೂ (ಪಾಪನಾಶನ ಮತ್ತು ಸರ್ವಭೋಗ) ನೀಡುವಂಥದ್ದು ಎಂದು ಅರ್ಥ. ಮನುಷ್ಯನ ಪಾಪನಾಶನವನ್ನು ಮಾಡಿ ಸರ್ವಭೋಗಗಳನ್ನು ಯಾವುದು ನೀಡುತ್ತದೆಯೋ ಅದೇ ಪ್ರಸಾದ.

ಪ್ರಸಾದ ಎಂದರೆ 'ಗುರು ಲಿಂಗ ಜಂಗಮಾನಾಂ ಭುಕ್ತಶೇಷಃ ಪ್ರಸಾದಕಃ' - ಗುರು-ಲಿಂಗ-ಜಂಗಮರಿಗೆ ಅರ್ಪಿತವಾದ ಪದಾರ್ಥ,

'ಸಮರ್ಪಿತಃ ಪ್ರಸಾದೈಕಾರಣತ್ವಾನ್ಮಹೇಶಿತುಃ' ಅಂದರೆ ದೇವರ ಅನುಗ್ರಹ ಅಥವಾ ಪ್ರಸನ್ನತೆ,

'ಪ್ರಸಾದತ್ವೇನ ವಿಖ್ಯಾತಃ ಪರಮಾನಂದದಾಯಕಃ' ಅಂದರೆ ಮಾನಸಿಕ ಪರಮಾನಂದವನ್ನು ನೀಡುವಂತಹದ್ದು. ಎಂಬ ಮೂರು ತರಹದ ಪ್ರಸಾದದ ಉಲ್ಲೇಖ ಚಂದ್ರಜ್ಞಾನಾಗಮದಲ್ಲಿ ಉಲ್ಲೇಖವಾಗಿದೆ. ಇಲ್ಲಿ ಹೇಳಲಾದ ಗುರು-ಲಿಂಗ-ಜಂಗಮರಿಗೆ ಸ್ವಚ್ಛಮನಸ್ಸಿನಿಂದ ಅರ್ಪಿಸುವುದು ಬಹಿರಂಗ ಪ್ರಸಾದವಾದರೆ ಇನ್ನುಳಿದಂತೆ ಪ್ರಸನ್ನತೆ ಮತ್ತು ಪರಮಾನಂದ ಆಂತರಿಕ ಅರ್ಪಣೆಯನ್ನು ಕುರಿತು ಹೇಳುತ್ತದೆ. ಪ್ರಸನ್ನಚಿತ್ತದಿಂದ ಅರ್ಪಿಸುವುದೇ ಪ್ರಸಾದ.

**ಪ್ರಸಾದದ ವಿಧಾನಗಳು:**

ವಚನಕಾರರಲ್ಲಿ ಪ್ರಸಾದದ ವಿಧಗಳ ಬಗ್ಗೆ ಒಮ್ಮತದ ಅಭಿಪ್ರಾಯವಿಲ್ಲ.

ಕೆಲವರು 3 ಪ್ರಕಾರದ ಪ್ರಸಾದಗಳನ್ನು ಪ್ರಸ್ತಾಪಿಸಿದರೆ ಇನ್ನೂ ಕೆಲವರು 11 ಪ್ರಕಾರದ ಪ್ರಸಾದಗಳನ್ನು ಕುರಿತು ಮಾತನಾಡಿದ್ದಾರೆ.

**ಕಾಡುಸಿದ್ದೇಶ್ವರ ಎಂಬ ಶರಣರು 4 ವಿಧದ ಪ್ರಸಾದಗಳನ್ನು ಕುರಿತು ಹೇಳಿದ್ದಾರೆ:**

1. ಅಚ್ಚಪ್ರಸಾದ – ಗುರುವಿನಿಂದ ಲಭಿಸಿದ ಶುದ್ಧ ಪ್ರಸಾದ.
2. ನಿಚ್ಚಪ್ರಸಾದ – ಇಷ್ಟಲಿಂಗ ಪ್ರಸಾದ.
3. ಸಿದ್ಧಪ್ರಸಾದ – ಜಂಗಮತ್ವದಿಂದ ಲಭಿಸಿದ ಪ್ರಸಾದ.
4. ಸಮಯ ಪ್ರಸಾದ – ಜೀವತ್ವವನ್ನು ನಷ್ಟವಾಗಿಸಿಕೊಂಡು ಜಂಗಮತ್ವವನ್ನು ಸ್ವಾಯತ್ತ ಮಾಡಿಕೊಂಡು ಪಡೆದ ಪ್ರಸಾದ.

**ಕುಷ್ಟಗಿ ಕರಿಬಸವೇಶ್ವರ ಎಂಬ ವಚನಕಾರರ ಪ್ರಕಾರ:**

1. ಗುರು ಪ್ರಸಾದ – ಗುರುವಿನಿಂದ ಬಂದದ್ದು.
2. ನಿತ್ಯ ಪ್ರಸಾದ – ಲಿಂಗದ ಮುಖಾಂತರ ಬಂದದ್ದು.
3. ಜ್ಞಾನ ಪ್ರಸಾದ – ಜಂಗಮತ್ವದಿಂದ ಬಂದದ್ದು.
4. ಸಿದ್ಧ ಪ್ರಸಾದ – ಜ್ಞಾನದಿಂದ ಬಂದ ಪ್ರಸಾದ.

**ಏಕಾದಶ ಪ್ರಸಾದಗಳು:**

1. ಗುರು ಪ್ರಸಾದ/ಶುದ್ಧಪ್ರಸಾದ – ಪೂಜಾನಂತರ ಗುರುವಿನಿಂದ ಪಡೆದ ಪ್ರಸಾದ.
2. ಲಿಂಗಪ್ರಸಾದ – ಶುದ್ಧಪ್ರಸಾದವನ್ನು ಲಿಂಗಕ್ಕೆ ಅರ್ಪಿಸಿದರೆ ಲಿಂಗಪ್ರಸಾದ.
3. ಜಂಗಮ/ಪ್ರಸಿದ್ಧ ಪ್ರಸಾದ – ಸಿದ್ಧಪ್ರಸಾದವನ್ನು ಜಂಗಮಾರ್ಪಣಭಾವದಿಂದ ಸ್ವೀಕರಿಸುವುದು.
4. ಪ್ರಸಾದಿಯ ಪ್ರಸಾದ – ಗುರು, ಲಿಂಗ, ಜಂಗಮರಿಂದ ಪಡೆದ ಪ್ರಸಾದದೊಡನೆ ತನ್ನ ಪ್ರಸಾದವನ್ನು ಸಮರಸಭೋಗ ಮಾಡಿ ಭುಂಜಿಸುವುದು ಪ್ರಸಾದಿ ಪ್ರಸಾದ.
5. ಆಪ್ಯಾಯನ ಪ್ರಸಾದ – ಶುದ್ಧ, ಸಿದ್ಧ, ಪ್ರಸಿದ್ಧ ಪ್ರಸಾದದಿಂದ ಉಂಟಾಗುವ ಮನೋವಿಕಾಸ.
6. ಸಮಯ ಪ್ರಸಾದ – ಇತರೇ ಪದಾರ್ಥಗಳು ಯೋಗ್ಯವಲ್ಲವೆಂದು ಅವುಗಳತ್ತ ಮನವಿಡದಿರುವುದು.
7. ಪಂಚೇಂದ್ರಿಯ ವಿರಹಿತ ಪ್ರಸಾದ – ಇತರ ವಿಷಯಗಳ ಕಡೆಗೆ ಮನಸ್ಸನ್ನು ಹೋಗದಂತೆ ಮಾಡುವುದು.
8. ಸದ್ಭಾವ ಪ್ರಸಾದ – ಸದ್ಭಾವವನ್ನು ಹೊಂದಿ ಸ್ವೀಕರಿಸಿದ ಪ್ರಸಾದ.

9. ಅಂತಃಕರಣ ಚತುಷ್ಟಯ ವಿರಹಿತ ಪ್ರಸಾದ – ಇತರ ಸಂಕಲ್ಪಾದಿಗಳಿಗೆ ಮನಸ್ಸು ಸುಳಿಯದಂತೆ ನಿರ್ಮಲಚಿತ್ತದಿಂದ ಪ್ರಸಾದವನ್ನು ಸೇವಿಸುವುದು.
10. ಸಮತಾ ಪ್ರಸಾದ – ಯಾವುದರಿಂದ ಶಾಂತಿ ಸಹನೆಯನ್ನು ಪಡೆಯುತ್ತೇವೋ ಅದು ಸಮತಾ ಪ್ರಸಾದ.
11. ಜ್ಞಾನ ಪ್ರಸಾದ – ಪ್ರಸಾದಕಾಯನಾಗಿರುವೆನೆಂಬ ಸುಜ್ಞಾನವೇ ಜ್ಞಾನಪ್ರಸಾದ.

ಮೇಲಿನ ಪ್ರಸಾದಗಳ ವಿಧಗಳಲ್ಲಿ ಇರುವ ಭಿನ್ನತೆಗಳನ್ನು ಗಮನಿಸಿದರೆ ಏಕರೂಪತೆ ಇಲ್ಲದಿರುವುದು ಎದ್ದು ಕಾಣುತ್ತದೆ. ವಚನಕಾರರಲ್ಲಿ ಪ್ರಸಾದದ ಹೆಸರುಗಳಲ್ಲಿ ಹಾಗೂ ಸಂಖ್ಯೆಗಳಲ್ಲಿ ವ್ಯತ್ಯಾಸಗಳಿದ್ದರೂ ಅರ್ಥದ ಹಿನ್ನೆಲೆಯಲ್ಲಿ ಪ್ರಸಾದವನ್ನು ಸ್ವೀಕರಿಸುವ ಹಾಗೂ ವಿವರಿಸಿಕೊಳ್ಳುವ ನಿಟ್ಟಿನಲ್ಲಿ ಏಕರೂಪ ಅಭಿಪ್ರಾಯಗಳನ್ನು ಗಮನಿಸಬಹುದಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸಾದ ಎಂಬುದು ಕೇವಲ ಅನ್ನ, ನೈವೇದ್ಯವೆಂದಷ್ಟೇ ಅಲ್ಲದೇ ತನ್ನ ಅರ್ಥವನ್ನು ವಿಸ್ತರಿಸಿಕೊಂಡಿದೆ.

**ಪ್ರಸಾದದ ಸ್ವರೂಪ:**

ಪ್ರಸಾದದ ಪ್ರಕಾರಗಳಲ್ಲಿ ಹೇಗೆ ಏಕರೂಪತೆಯನ್ನು ವಚನಕಾರರಲ್ಲಿ ಹೇಳಲು ಸಾಧ್ಯವಿಲ್ಲವೋ, ಹಾಗೇ ಪ್ರಸಾದದ ಸ್ವರೂಪವನ್ನು ವಚನಗಳಲ್ಲಿ ವಿವರಿಸುವಾಗ ವಚನಕಾರರು ತಮ್ಮ ತಮ್ಮ ನೆಲೆಯಲ್ಲಿ ವಿವರಿಸಿಕೊಂಡಿದ್ದಾರೆ.

**ಚನ್ನಬಸವಣ್ಣ:**

"ಬಯಸಿ ಬಂದದ್ದು ಭೋಗ, ಬಯಸದೆ ಬಂದದ್ದು ಲಿಂಗಭೋಗ, ಬಯಸಿ ಬಂದ ಅಂಗಭೋಗವು ಲಿಂಗಾರ್ಪಿತವಾಗದು, ಬಯಸದೆ ಬಂದ ಲಿಂಗಭೋಗವು ಲಿಂಗಾರ್ಪಿತವಾಗಿ ಪ್ರಸಾದವೆನಿಸುವುದು" ಎಂಬ ವಚನವು ಬಾಹ್ಯ ಭೋಗವನ್ನು ತಿರಸ್ಕರಿಸಿ ಅನಿರೀಕ್ಷಿತವಾಗಿ ಬಂದದ್ದನ್ನು ಲಿಂಗಾರ್ಪಣಮಾಡಿ ಸ್ವೀಕರಿಸಬೇಕು, ಅದೇ ಪ್ರಸಾದವೆಂದು ವಿವರಿಸುತ್ತದೆ.

**ಅಲ್ಲಮಪ್ರಭು:**

"ಶಬ್ದ, ಸ್ಪರ್ಶ, ರೂಪ, ರಸ, ಗಂಧ ಮುಂತಾದ ಯಾವ ಪದಾರ್ಥವೇ ಆದರೂ ಅದನ್ನು ಹಸಿವಿನಾಸೆಗೆ ತನುವು ಬಂದು ಸೋಂಕುವ ಮುನ್ನ, ಅದರಂತೆ ತೃಪ್ತಿಯು ಬಂದು ಆವರಿಸುವ ಮುನ್ನ ಲಿಂಗಕ್ಕೆ ಅರ್ಪಿಸಬೇಕು ಅದೇ ಪ್ರಸಾದ." ಅಂದರೆ ಪ್ರಾಪಂಚಿಕ ಎಲ್ಲಾ ವಿಷಯವಸ್ತುಗಳು ಲಿಂಗದಿಂದ ಬಂದದ್ದೆಂದು ಎಲ್ಲವನ್ನೂ ಲಿಂಗಕ್ಕೆ ಅರ್ಪಿಸಿ ಸ್ವೀಕರಿಸಬೇಕೆಂದು ಪ್ರಸಾದವನ್ನು ಕುರಿತು ಒಂದು ವಚನದಲ್ಲಿ ಪ್ರಸ್ತಾಪಿಸಿದ್ದಾರೆ.

ಹೀಗೆ ಅಕ್ಕಮಹಾದೇವಿ ಒಂದು ವಚನದಲ್ಲಿ, ಜೇಡರ ದಾಸಿಮಯ್ಯ, ಷಣ್ಮುಖ ಶಿವಯೋಗಿ ಹಲವರು ಪ್ರಸಾದವನ್ನು ಕುರಿತು ತಮ್ಮದೇ ಅನುಭಾವಿಕ ನುಡಿಗಳನ್ನು

ಕಟ್ಟಿಕೊಟ್ಟಿದ್ದಾರೆ.

ಪ್ರಸಾದವನ್ನು ಕುರಿತು ಹೀಗೆ ಹಲವು ವಚನಕಾರರು ಪ್ರಸಾದದ ವಿಧಗಳು, ಪ್ರಸಾದದ ಸ್ವರೂಪ, ಪ್ರಸಾದವನ್ನು ಅರ್ಪಿಸುವ ಪರಿ, ಪ್ರಸಾದವನ್ನು ಸ್ವೀಕರಿಸುವ ವಿಧಿ, ಪ್ರಸಾದದ ಮಹಿಮೆಯನ್ನು ವಿಸ್ತಾರವಾಗಿ ತಮ್ಮ ವಚನಗಳಲ್ಲಿ ಹಿಡಿದಿಟ್ಟಿದ್ದಾರೆ.

ವಚನಕಾರರಲ್ಲಿ ಪ್ರತಿಯೊಬ್ಬ ವಚನಕಾರನೂ ಇನ್ನೊಬ್ಬರಿಗಿಂತ ಭಿನ್ನವಾಗಿ ತಮ್ಮ ಅನುಭವ ಜಗತ್ತಿಗೆ ಧ್ವನಿಯನ್ನು ನೀಡುವುದರ ಮೂಲಕ ಜೀವಂತವಾಗಿದ್ದಾರೆ. ತಮ್ಮ ವಿಭಿನ್ನ ಅನುಭವಗಳಿಂದ ಇತಿಹಾಸ ಪುಟಗಳಲ್ಲಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡ 12ನೇ ಶತಮಾನದ ವಚನಕಾರರೆಂದರೆ ಆಯ್ದಕ್ಕಿ ಲಕ್ಕಮ್ಮ ಮತ್ತು ಮಾರಯ್ಯ ದಂಪತಿಗಳು. ಅತ್ಯಂತ ಕಾಯಕನಿಷ್ಠರಾದಂತಹ ಇವರು ತಮ್ಮ ಇಡೀ ಜೀವನವನ್ನು ಶರಣರ ಸೇವೆಗೇ ಮುಡಿಪಿಟ್ಟವರು.

ಆಯ್ದಕ್ಕಿ ಮಾರಯ್ಯ ಮತ್ತು ಲಕ್ಕಮ್ಮ ದಂಪತಿಗಳು ಮೂಲತಃ ರಾಯಚೂರು ಜಿಲ್ಲೆಯ ಲಿಂಗಸಗೂರು ತಾಲೂಕಿನ ಅಮರೇಶ್ವರ ಎಂಬ ಗ್ರಾಮದವರು. ಬಸವಣ್ಣನವರ ಮಹಿಮೆಯು ಮನೆಮಾತಾಗಿದ್ದ ಕಾಲದಲ್ಲಿ ಬಸವಣ್ಣನವರಲ್ಲಿ ಅಪಾರ ಭಕ್ತಿಯನ್ನು ಹೊಂದಿ ಈ ದಂಪತಿಗಳು ರಾಯಚೂರನ್ನು ತೊರೆದು ಕಲ್ಯಾಣಕ್ಕೆ ಬಂದು ಸೇರಿದರು. ಅನುಭವ ಮಂಟಪದ ಸದಸ್ಯರಾದ ಇವರು ಕಾಯಕ ಮತ್ತು ದಾಸೋಹದ ಮೂಲಕ ವಚನಕ್ರಾಂತಿಯಲ್ಲಿ ತಮ್ಮ ನಿಷ್ಠಾವಂತ ಜೀವನದ ಪ್ರತೀಕವಾಗಿ ಗುರುತಿಸಲ್ಪಟ್ಟವರು. ಕಾಯಕ ಪೂಜೆ, ದಾಸೋಹಭಾವ ಇದೇ ಈ ದಂಪತಿಗಳ ಜೀವನದ ಸಾರವಾಗಿತ್ತು. ಸಮಾಜಕ್ಕೆ ಮಾರಕವಾದ, ಶೋಷಣೆಗೆ ಕಾರಣವಾದ ಬಂಡವಾಳದ ಸಂಗ್ರಹವನ್ನು ವಿರೋಧಿಸಿದವರು ಈ ದಂಪತಿಗಳು.

ಆಯ್ದಕ್ಕಿ ಮಾರಯ್ಯ ಮತ್ತು ಲಕ್ಕಮ್ಮ ದಂಪತಿಗಳು ಆಧ್ಯಾತ್ಮಿಕ ಶಿಖರದಂತಿದ್ದವರು. ಇವರ ವಚನಗಳಲ್ಲಿ ಇವರ ಸರಳತೆಯನ್ನು ಗುರುತಿಸಬಹುದಾಗಿದೆ. ಇವರು ದಾಸೋಹವನ್ನು ನಡೆಸುವುದರ ಜೊತೆಗೆ ಹಲವಾರು ಸಾಮಾಜಿಕ ಬದಲಾವಣೆಗೆ ಕೈಜೋಡಿಸಿದರು. ಕಾಯಕ ದಾಸೋಹವೇ ಅಲ್ಲದೆ ಪ್ರಸಾದಕ್ಕೂ ತಮ್ಮದೇ ಆದ ವಿವರಣೆಗಳನ್ನು ದಂಪತಿಗಳಿಬ್ಬರೂ ತಲಾ ಒಂದೊಂದು ವಚನಗಳಲ್ಲಿ ನೀಡಿದ್ದಾರೆ.

**ಆಯ್ದಕ್ಕಿ ಮಾರಯ್ಯ:**

**ಸತ್ಯವೆಂಬ ತಟ್ಟೆಯಲ್ಲಿ ಚಿತ್ತಶುದ್ಧವೆಂಬ ವಿಭೂತಿಯ ಬಚ್ಚಿಟ್ಟು**
**ಸಕಲ ಸಂಪದದ ಪ್ರಮಥರು ಮುಂದಾಗಿ**
**ಅಮರೇಶ್ವರ ಲಿಂಗದ ಆಶ್ರಯಕ್ಕೆ ಪ್ರಸಾದವ ಕೊಂಬುದಕ್ಕೆ**
**ಬಾ ಬಸವಣ್ಣ**

ಮಾರಯ್ಯನ ಈ ವಚನವು ಪ್ರಸಾದವೆಂಬುದು ಸತ್ಯಶುದ್ಧ ಹಾಗೂ ಚಿತ್ತಶುದ್ಧವಾಗಿರುವುದನ್ನು ತಿಳಿಸುತ್ತದೆ. ಇವರ ಪ್ರಕಾರ ಪ್ರಸಾದವೆಂಬುದು ಸದಾ

ಸತ್ಯವನ್ನು ನುಡಿಯುವ, ನುಡಿದಂತೆ ನಡೆಯುವ ಮನಸ್ಸು ಹೊಂದುವುದೇ ಪ್ರಸಾದ. ಈ ಪ್ರಸಾದವನ್ನು ಸ್ವೀಕರಿಸಲು ಬಸವಣ್ಣನವರನ್ನು ಆಹ್ವಾನಿಸುವ ರೀತಿಯಲ್ಲಿ ಈ ವಚನ ರಚನೆಯಾಗಿದೆ. ಇದಕ್ಕಿಂತಲೂ ಭಿನ್ನವಾಗಿ ಹಾಗೂ ವಿಶಾಲವಾದ ಅರ್ಥವನ್ನು ನೀಡಿರುವ ವಿಚಾರ ಆಯ್ದಕ್ಕಿ ಲಕ್ಕಮ್ಮನ ವಚನದಲ್ಲಿ ಕಂಡುಬರುತ್ತದೆ.

**ಆಯ್ದಕ್ಕಿ ಲಕ್ಕಮ್ಮ:**

**"ಬಸವಣ್ಣನ ಪ್ರಸಾದವ ಕೊಂಡು**
**ಎನ್ನ ಕಾಯ ಶುದ್ಧವಾಯಿತ್ತಯ್ಯಾ**
**ಚನ್ನಬಸವಣ್ಣನ ಪ್ರಸಾದವ ಕೊಂಡು**
**ಎನ್ನ ಜೀವ ಶುದ್ಧವಾಯಿತ್ತಯ್ಯಾ**
**ಮಡಿವಾಳಯ್ಯನ ಪ್ರಸಾದವ ಕೊಂಡು**
**ಎನ್ನ ಭಾವ ಶುದ್ಧವಾಯಿತ್ತಯ್ಯಾ**
**ಶಂಕರ ದಾಸಿಮಯ್ಯನ ಪ್ರಸಾದವ ಕೊಂಡು**
**ಎನ್ನ ತನು ಶುದ್ಧವಾಯಿತ್ತಯ್ಯಾ**
**ಸಿದ್ಧರಾಮಯ್ಯನ ಪ್ರಸಾದವ ಕೊಂಡು**
**ಎನ್ನ ಮನ ಶುದ್ಧವಾಯಿತ್ತಯ್ಯಾ**
**ಘಟ್ಟಿವಾಳಯ್ಯನ ಪ್ರಸಾದವ ಕೊಂಡು**
**ಎನ್ನ ಪ್ರಾಣ ಶುದ್ಧವಾಯಿತ್ತಯ್ಯಾ**
**ಅಕ್ಕನಾಗಮ್ಮನ ಪ್ರಸಾದವ ಕೊಂಡು**
**ಎನ್ನ ಅಂತರಂಗ ಶುದ್ಧವಾಯಿತ್ತಯ್ಯಾ**
**ಮುಕ್ತಾಯಕ್ಕನ ಪ್ರಸಾದವ ಕೊಂಡು**
**ಎನ್ನ ಬಹಿರಂಗ ಶುದ್ಧವಾಯಿತ್ತಯ್ಯಾ**
**ಪ್ರಭುದೇವರ ಪ್ರಸಾದವ ಕೊಂಡು**
**ಎನ್ನ ಸರ್ವಾಂಗ ಶುದ್ಧವಾಯಿತ್ತಯ್ಯಾ**
**ಇರುವ ಮುಖ್ಯವಾದ ಏಳುನೂರೆಪ್ಪತ್ತು ಅಮರ ಗಣಂಗಳ**
**ಪ್ರಸಾದವ ಕೊಂಡು ಬದುಕಿದ್ದೇನಯ್ಯಾ**
**ಮಾರಯ್ಯಪ್ರಿಯ ಅಮರೇಶ್ವರಾ**
**ನಿಮ್ಮ ಶರಣರ ಪಾದಕ್ಕೆ ಅಹೋರಾತ್ರಿಯಲ್ಲಿ**
**ನಮೋ ನಮೋ ಎನ್ನುತಿರ್ದೆನು."**

ಈ ಮೇಲ್ಕಂಡ ವಚನದಲ್ಲಿ ಪ್ರಸಾದವನ್ನು ಕುರಿತು ವಿಭಿನ್ನ ನಿಲುವನ್ನು ಕಾಣಬಹುದಾಗಿದೆ. ವಚನಕಾರರ ಪ್ರಕಾರ ಕಾಯ, ಜೀವ, ಭಾವ, ತನು, ಮನ, ಪ್ರಾಣ, ಅಂತರಂಗ, ಬಹಿರಂಗ, ಸರ್ವಾಂಗ ಹಾಗೂ ಬದುಕು ಶುದ್ಧವಾಗಲು ಕಾರಣ ಬಸವಾದಿ ಪ್ರಮಥರ ಪ್ರಸಾದವೆಂದು ಹೇಳಿದ್ದಾರೆ. ಇಲ್ಲಿ ಪ್ರಸಾದವನ್ನು ಶುದ್ಧವಾಗಿಸುವ ಜ್ಞಾನ ಎಂಬುದು ಈ ವಚನದ ತಾತ್ಪರ್ಯ. ಯಾವುದು ತಮ್ಮನ್ನು ಶುದ್ಧತೆಯ ಕಡೆಗೆ

ಕೊಂಡೊಯ್ಯುತ್ತದೆಯೋ ಅದೇ ನಿಜವಾದ ಪ್ರಸಾದ.

ದಾಸೋಹದ ಮುಂದುವರೆದ ರೂಪವಾದಂತಹ ಪ್ರಸಾದವು ಒಂದು ಸಾಂಸ್ಕೃತಿಕ ಪರಂಪರೆಯ ಐತಿಹಾಸಿಕ ಗುರುತಾಗಿ ಉಳಿದುಬಿಟ್ಟಿತು. ಸಂಪತ್ತನ್ನು ಕೇಂದ್ರೀಕರಿಸುವುದನ್ನು ತಿರಸ್ಕರಿಸಿದ ಇವರು ಸಿಕ್ಕ ಪ್ರಸಾದವನ್ನು ದಾಸೋಹದಲ್ಲಿ ಹಂಚುವ ಮೂಲಕ ಬಂಡವಾಳದ ಏಕಸ್ವಾಮ್ಯವನ್ನು ತಿರಸ್ಕರಿಸಿದರು. ಪ್ರಸಾದವನ್ನು ಪಡೆಯುವ ಹಾಗೂ ಹಂಚುವ ಮೂಲಕ ಸಮಾಜಮುಖಿಯಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಯಿತು.

ಹೀಗೆ ವಚನಕಾರರು ಪ್ರಸಾದವನ್ನು ವಿವರಿಸುವುದರ ಮೂಲಕ ಪ್ರಸಾದದ ಸೀಮಿತ ಅರ್ಥವನ್ನು ವಿಸ್ತರಿಸಿದ್ದಾರೆ. ಆಂತರಿಕ ಹಾಗೂ ಬಾಹ್ಯ ಬದುಕನ್ನು ಶುದ್ಧವಾಗಿಸುವ ವಿಷಯವಾದ ಪ್ರಸಾದ ಇಡೀ ವಚನ ಚಳುವಳಿಯಲ್ಲಿ ಪ್ರಮುಖ ಹಾಗೂ ಕೇಂದ್ರ ಪರಿಕಲ್ಪನೆಯಾಗಿ ಕಂಡುಬರುತ್ತದೆ. ಇಂದಿಗೂ ಈ ಪರಿಕಲ್ಪನೆಗಳು ಜೀವಿಸುತ್ತಿವೆ.

**ಪರಾಮರ್ಶನ ಗ್ರಂಥಗಳು:**


1. ಕಲಬುರ್ಗಿ ಎಂ. ಎಂ., (2001), ಸಮಗ್ರ ವಚನ ಸಂಪುಟ: 01 (ಬಸವಣ್ಣನವರ ವಚನಗಳು), ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.
2. ವೀರಣ್ಣ ರಾಜೂರ ಮತ್ತು ಡಾ. ಎಂ. ಎಂ. ಕಲಬುರ್ಗಿ, (2001), ಸಮಗ್ರ ವಚನ ಸಂಪುಟ: 05 (ಶಿವಶರಣೆಯರ ವಚನಗಳು), ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.
3. ಕಲಬುರ್ಗಿ ಎಂ. ಎಂ., (2001), ಸಮಗ್ರ ವಚನ ಸಂಪುಟ: 06 (ಸಂಕೀರ್ಣ ವಚನ ಸಂಪುಟ), ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.
4. ಮಹದೇವಪ್ಪ ಎಂ. ಜಿ., (2001), ಸಮಗ್ರ ವಚನ ಸಂಪುಟ: 15 (ವಚನ ಪಾರಿಭಾಷಾ ಕೋಶ), ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.
5. ತಿಪ್ಪೇರುದ್ರಸ್ವಾಮಿ ಹೆಚ್., (1969), ವಚನಗಳಲ್ಲಿ ವೀರಶೈವ ಧರ್ಮ, ಮೈಸೂರು: ಡಿ. ವಿ. ಕೆ. ಮೂರ್ತಿ ಪ್ರಕಾಶನ.
6. ವಿದ್ವಾನ್ ಎಂ. ಮಲ್ಲಣ್ಣ, (1997), ಶೈವಾಗಮ ಸಾರ, ಮೈಸೂರು: ಶ್ರೀ ಮಲ್ಲಿಕಾರ್ಜುನ ಗ್ರಂಥ ಪ್ರಕಾಶನ.